> ವ್ಯಕ್ತಿಯೊಬ್ಬ ಇಷ್ಟವಾದರೆ ಮಾತಿನ ಹರಿವೇ ಹೇಗೆ ಬದಲಾಗುತ್ತದೆ ಅಲ್ವೇ ಎಂದುಕೊಂಡಳು. ತನಗೆ ಮೆಚ್ಚುಗೆಯಾದವರೂ ತನ್ನನ್ನೂ ಮೆಚ್ಚುವವರೂ ಒಬ್ಬರೇ ಆಗಿದ್ದಾಗ ಮಾತ್ರ ಬಹುಶಃ ಮನುಷ್ಯ ಉಲ್ಲಸಿತನಾಗೋದು ಏನೋ!

ಅಭ್ಯಾಸವೇನೋ ಎಂದು ಅಂದುಕೊಂಡು ನಗು ಬಂತು. ಜಗತ್ತಿನಲ್ಲಿ ಏಳು ಜನ ಒಂದೇ ರೀತಿ ಇರುತ್ತಾರಂತೆ, ಇನ್ನುಳಿದ ಐದು ಜನ ಎಲ್ಲಿದ್ದಾರೋ ಏನೋ ಎಂದು ಯೋಚಿಸುತ್ತಿದ್ದವಳಿಗೆ ಸದ್ಯ, ಆ ಕುಲಕರ್ಣಿ ಬಂದಿಲ್ಲವಲ್ಲ ಎಂದುಕೊಳ್ಳುತ್ತಿದ್ದರೆ, ಅದನ್ನು ಅರಿತವನಂತೆ ರಮಾಕಾಂತ ಬೇಡೆಕರ್ 'ಕುಲಕರ್ಣಿ ಬಂದಿಲ್ಲ ಕೇತಕಿ' ಎಂದು ಅರ್ಥಗರ್ಭಿತವಾಗಿ ನಕ್ಕರು. ಕೇತಕಿಯೂ ಅದರ ಮರ್ಮ ತಿಳಿದಂತೆ ತುಂಬು ನಗೆಯನ್ನು ನಕ್ಕಳು. ಹುಬ್ಬೇರಿಸಿದ ಜೋಶಿಗೆ ಬೇಡೆಕರ್ 'ವಿಶೇಷ್ ಕಾಯ್ ನಹಿ, ಹಿವಾಸ್ ಮೋರ್ ಇಂಟರೆಸ್ಟಡ್ ಇನ್ ಕೇತಕಿ ದಾನ್ ಇನ್ ದಿ ಸೆಮಿನಾರ್' ಎಂದು ನಕ್ಕರು. ಮುಕುಂದ್ ಜೋಶಿ, 'ಪೂರ್ ಫೆಲೋ, ಅವ್ನದ್ದೇನೂ ತಪ್ಪಿಲ್ಲ ಬಿಡಿ' ಎಂದು ಕೇತಕಿಯ ಮುಖ ನೋಡಿದಾಗ ಕೇತಕಿಯ ಮುಖ ಕೆಂಪಾಯಿತು. ಓಹ್! ಶಂಕರನ ತುಂಟತನವೂ ಇವನಲ್ಲಿದೆ ಎಂದು ಅವರೊಂದಿಗೆ ನಗೆಯಲ್ಲಿ ಭಾಗಿಯಾದಳು.

ಒಳ ಬಂದು ಕೂತ ಕೇತಕಿಗೆ ಮುಕುಂದ್ ಜೋಶಿಯೆಡೆಗೆ ನೋಡಲೂ ಸಂಕೋಚ, ಎಲ್ಲಿ ತನ್ನ ಕಣ್ಣೊಳಗಿನ ಕುತೂಹಲ ತಿಳಿದುಬಿಡಬಹುದೆಂದು. ಆನಂದ ಜೋಶಿಯವರ ಅಧ್ಯಕ್ಷತೆಯಲ್ಲಿ ಸೆಮಿನಾರು ಆರಂಭವಾಯಿತು. ಎದುರೆದುರು ಕೂತ ಮುಕುಂದ್ ಜೋಶಿ ಮತ್ತು ಕೇತಕಿಯ ಕಣ್ಣುಗಳು ಬೇಡವೆಂದರೂ ಆಗಾಗ ಸಂಧಿಸುತ್ತಿದ್ದವು. ಸಹಜವೆನ್ನುವಂತೆ ನೋಡಿದರೂ ಯಾಕೋ ಕಣ್ಣಿನಲ್ಲಿ ಅನುರಕ್ತಿ ಹುಟ್ಟಿದಂತೆ ಭಾಸವಾಯಿತು. ತನಗೇನೋ ಇವ್ನು ಶಂಕರನಂತೆಯೆ ಕಂಡ ಎನ್ನುವ ಅನುರಕ್ತಿ, ಆದರೆ ಇವನಿಗೆ? ಕೇತಕಿಗೆ ಗಲಿಬಿಲಿಯಾಗತೊಡಗಿತು. ಆ ಕಣ್ಣಿನ ಅನುರಕ್ತಿಗೆ ನಿಧಾನಕ್ಕೆ ಸೋಲತೊಡಗಿದಳು. ನಡುನಡುವೆ ತನ್ನನ್ನು ಬಹಳ ಹಿಂದಿನ ಪರಿಚಯವೇನೋ ಎನ್ನುವಂತೆ ಸಂವಾದದಲ್ಲಿ ಭಾಗಿಯಾಗುವಂತೆಯೂ ನೋಡಿಕೊಂಡಾಗ ಶಂಕರ ನೆನಪಾದ. ಇಂಥದ್ದೇ ಕಣ್ಣು ಆಗಲೂ ಕಟ್ಟಿ ಹಾಕಿದ್ದು; ಅದೆಷ್ಟು ಅಕ್ಕರೆ, ಮೋಹ ತನ್ನ ಮೇಲೆ. ನೆನಪಾದಂತೇ ಇರಿಸುಮುರಿಸು. ಯಾಕಪ್ಪಾ ಈ ಮನುಷ್ಯ ತನ್ನೆದುರು ಬಂದ ಎನ್ನುವ ಯೋಚನೆ ಕೇತಕಿಗೆ ಬಂತು. ತುಂಬಿದ ಮನಸ್ಸೂ ಮತ್ತೆ ಸೋಲುತ್ತದೆಯೇ! ತಾನು ಸೋಲುತ್ತಿರುವುದು ಶಂಕರನ ಪ್ರತಿರೂಪಕ್ಕೋ, ಅಲ್ಲಾ ಮುಕುಂದನ ರೂಪದಲ್ಲಿ ಬಂದ ಹೊಸ ಮೆಚ್ಚುಗೆಗೋ! ಮನಸ್ಸಿನ ಭ್ರಮಿಸುವಿಕೆ ಬಗ್ಗೆ ಸೋಜಿಗವಾಯಿತು. ಮನಸ್ಸು ಹೊಸ ಹೊಸ ವಾಲಿಡೇಶನ್ ಬಯಸುತ್ತದೆಯೇ! ಮುಕುಂದ್ ಜೋಶಿಯ ಕಣ್ಣಿನ ಮೆಚ್ಚುಗೆ ಕೂರಂಬಿನಂತೆ ಇರಿಯುತ್ತಿತ್ತು. ಇಷ್ಟೆಲ್ಲಗಳ ನಡುವೆ ಆತನ ಜ್ಞಾನ, ಮಾತಿನ ಚಾಣಾಕ್ಷತೆ ಕಟ್ಟಿ ಹಾಕುತ್ತಿತ್ತು. ಇಲ್ಲ, ಇದ್ಯಾಕೋ ಸರಿದಾರಿಯಲ್ಲಿ ನಡೆಯುತ್ತಿಲ್ಲವೆಂದುಕೊಂಡು ಪೂರ್ತಿ ಆನಂದ ಜೋಶಿಯವರ ಕಡೆಗೆ ತಿರುಗಿ ಕೂತಳು. ಆನಂದ ಜೋಶಿಯವರು ಮಾತು ಮುಗಿಸಿ, ಎಲ್ಲರಿಗೂ ಮುಕುಂದ್ ಜೋಶಿಯ ಪರಿಚಯವನ್ನು ಮಾಡಿದರು. 'ಮುಕುಂದ್ ಜೋಶಿ, ಈ ಪ್ರಾಜೆಕ್ಟಿಗೆ ತುಂಬ ಮುಖ್ಯ ವ್ಯಕ್ತಿ. ಆರ್ಕಿಯಾಲಾಜಿಸ್ಟ್. ಪುಣೆಯ ವಾಕಣಕರ್ ಶೋಧ ಸಂಸ್ಥಾನದಲ್ಲಿ ತುಂಬ ಕೆಲಸ ಮಾಡಿದವರು, ಬೈದಿವೆ! ಮುಖ ನೋಡಿ ವಯಸ್ಸೂ ಹೇಳ್ತಾರೆ' ಎಂದು ತಮಾಷೆಯೊಂದಿಗೆ ಮೆಚ್ಚುಗೆ ವ್ಯಕ್ತಪಡಿಸಿದಾಗ ಎಲ್ಲರ ಚಪ್ಪಾಳೆಯ ಸದ್ದಿಗೆ ಕೇತಕಿಯೂ ನಸು ನಕ್ಕಳು. ಮುಕುಂದ್